3. ತಾನು ಹರಾಜಿನಲ್ಲಿ ಪಡದಿರುವ ಚವುಬೀನಾ ಕಿಮ್ಮತ್ತ ಪೂರ್ತಿ ಪಾವತಿ ಮಾಡದೆಯೂ ಮತ್ತು ಸದರ ಚವುಬೀನಾವನ್ನು ಸಾಗಿಸುವದಕ್ಕೆ ರವದಾ ಪಡೆಯದೆಯೂ ಮಾಲನ್ನು ರಫ್ತು ಮಾಡಕೂಡದು.

4. ಹರಾಜು ತಾರೀಖು ಲಾಗಾಯಿತು 90 ದಿವಸಗಳ ಮೇಲ್ಪಟ್ಟು ಮರಗಳನ್ನು ಡಿಪೋಯಿಂದ ಸಾಗಿಸದೆ ಇದ್ದಲ್ಲಿ ಹರಾಜು ತಾರೀಖು ಲಾಗಾಯಿತು ಖರೀದಿ ಮೊಬಲಗಿನ ಮೇಲೆ ವರ್ಷ ಬಂದಕ್ಕೆ ಶೇಕಡ ಬಂದಕ್ಕೆ 12 ರೂಪಾಯಿನ ಮೇರೆ ಡಿಪೋ ಭಾಡಾ ವಸೂಲು ಮಾಡಲಾಗುತ್ತೆ.

ಎಂ. ಜಿ. ರಾಮರಾವ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರ್, ಮೈಸೂರು ಡಿಸ್ಟ್ರಿಕ್ಟ್.

ಹಾಸನ ಡಿಸ್ಟ್ರಿಕ್ಟ್.

ನೋಟಿಸು, ತಾರೀಖು 5ನೆ ಅಕ್ಟೋಬರು 1907ನೆ ಇಸವಿ.

ಎರಡು ವರುಷಗಳಿಗಿಂತಲೂ ಅಧಿಕಕಾಲದಿಂದ ಜೀವರಹಿತವಾಗಿ ಇರುವ ಇದರಡಿ ಕಂಡ ದಸ್ತಾವೇಜನ್ನ ಹಾಜರು ಮಾಡಿದವರೇ ಆಗಲಿ ಅಥವಾ ಇವರಿಂದ ಅಧಿಕಾರ ಹೊಂದಿದ ಮುಖತ್ಯಾರೇ ಆಗಲಿ ಈ ನೋಟಿಸು ತಾರೀಖು ಲಾಗಾಯಿತು ಒಂದು ತಿಂಗಳೊಳಗಾಗಿ ಮುಂಜರಾಬಾದ್ ಸಬ್ ರಿಜಿಸ್ಟ್ರಾರ್ ರೂಬ್ ರೂಬ್ ಹಾಜರಾಗಿ ತೆಗೆದುಕೊಳ್ಳದೆ ಇದ್ದರೆ, ರಿಜಿಸ್ಟ್ರೇಷನ್ ರೆಗ್ಯುಲೇಷನ್ ನಂ. 13 85ನೆ ಸೆಕ್ಷನ್ ಅನುಸರಿಸಿ ಈ ಕೆಳಗೆ ನಮೂದಾಗುವ ದಸ್ತಾವೇಜನ್ನ ನಾಶಪಡಿಸುತ್ತೆ :—

ನಂಬರ್ ನಂಬರ್.	ಸಬ್ ರಿಜಿಸ್ಟ್ರಾರರ ಆಫೀಸಿನ ಹೆಸರು.	ಬುಕ್ಕಿನ ನಂಬರು.	ದಸ್ತಾವೇಜಿನ ನಂಬರು.	ದಸ್ತಾವೇಜು ಹುಟ್ಟಿದ ತಾರೀಖು.	ದಸ್ತಾವೇಜು ರಿಜಿಸ್ಟರು ಆಫೀಸಿನಲ್ಲಿ ತೆಗೆದಿರಿಸಿದ ತಾರೀಖು.	ದಸ್ತಾವೇಜು ಬರೆದುಕೊಟ್ಟವರ ಹೆಸರು.	ದಸ್ತಾವೇಜು ಒಪ್ಪಿಸಿಕೊಂಡವರ ಹೆಸರು.	ದಸ್ತಾವೇಜಿನ ಸ್ವಭಾವ ಮತ್ತು ಪ್ರಮಾಣ.
1	ಮುಂಜರಾಬಾದ್	I	465 / 1894-95	25-4-1895	27-6-95	ಮುಂಜರಾಬಾದು ತಾಲ್ಲೂಕು ಹುಣಸೂರು ಸಂಜೆ ಹೋಬಳಿ ಗ್ರಾಮದವರಿಗೂ ಕೃಷ್ಣಪ್ಪನವರಿಗೂ ಡಿಪೋ ಕಟ್ಟಿಗೆಗಾಜ ಡಿಪೋ ಮಂಜೇಗೌಡ	ಕಾಕ್ಸ್‌ವಾರ್ ಸಂಸ್ಥಾನ ಕೊಯಮತ್ತೂರಿನ ಎಜೆರ್ಟನ್ ಬರ್ಗ ಸಂ ಗ್ರಾಮದವರಿಗೂ ಜೆಗೌಡ	1,000 ಬೊಡಾಸಿನ ಅಟ್ಟಿಗೆ ಪಚ್ಚೆ.

ಎಂ. ಲಕ್ಷ್ಮಣಶಾಸ್ತ್ರಿ,
ಫಾರ್ ಡಿಸ್ಟ್ರಿಕ್ಟ್ ರಿಜಿಸ್ಟ್ರಾರ್.

ಮೈಸೂರು ಡಿಸ್ಟ್ರಿಕ್ಟ್.

ಇಸ್ತಿಹಾರ್ನಾಮೆ.

ತಾರೀಖು 11ನೆ ಅಕ್ಟೋಬರ್ 1907.

ತಿರುಮಕೂಡ್ಲು ನರಸೀಪುರ ತಾಲ್ಲೂಕು ತಲ್ತಾಡು ಹೋಬಳಿಗೆ ಕೇರಿದ ಖಾಯಂ ಗುತ್ತಾ ಮೇಗಡಹಳ್ಳಿ ಗ್ರಾಮವು ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ತಿರುಮಕೂಡ್ಲು ನರಸೀಪುರ ತಾಲ್ಲೂಕು ಕಛೇರಿಯಲ್ಲಿ 1907ನೆ ಜನವರಿ ಮಾಹೆ 8ನೆ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹೆಚ್ಚು ತಪಸೀಲ್ ಬಗ್ಗೆ ಸ್ರ1907ನೆ ಇಸವಿ ಅಕ್ಟೋಬರ್ ತಾರೀಖು 31ನೆ ಮರ್ಕುಂ 43ನೆ ನಂಬರ್ ಮೈಸೂರು ಗೆಜೆಟ್ಟಿನ 11ನೆ ಭಾಗದ 515, 516ನೆ ನಂಬರ್ ಪೇಜು ನೋಡತಕ್ಕದ್ದು.

ತಾರೀಖು 11ನೆ ಅಕ್ಟೋಬರ್ 1907.

ಹುಣಸೂರು ತಾಲ್ಲೂಕು ಪೆರಿಯಾಪಟ್ಟಣ ಹೋಬಳಿಗೆ ಕೇರಿದ ಜೋಡಿ ಹಿಟ್ನ ಹೆಬ್ಬಾಗಿಲು ಗ್ರಾಮವು ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ಹುಣಸೂರು ತಾಲ್ಲೂಕು ಅಮಲ್ದಾರರವರ ಕಛೇರಿಯಲ್ಲಿ 1907ನೆ ಡಿಸೆಂಬರ್ ಮಾಹೆ 2ನೆ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹೆಚ್ಚು ತಪಸೀಲ್ ಬಗ್ಗೆ ಸ್ರ1907ನೆ ಇಸವಿ ಅಕ್ಟೋಬರ್ 31ನೆ ಮರ್ಕುಂ 43ನೆ ನಂಬರ್ ಮೈಸೂರು ಗೆಜೆಟ್ಟಿನ 11ನೆ ಭಾಗದ 514, 515ನೆ ನಂಬರ್ ಪೇಜು ನೋಡತಕ್ಕದ್ದು.

ಟಿ. ಕೆ. ಸುಂದರರಾಜೈಯ್ಯಂಗಾರ್,
ಫಾರ್ ಡೆಪ್ಯೂಟಿ ಕಮಿಷನರ್.